ಕರ್ನಾಟಕ ಕಿಯೋನಿಕ್ಸ್ ಸಂಸ್ಥೆ ಎಲೆಕ್ಟ್ರಾನಿಕ್ ನಗರವನ್ನು ಮಾಡುವ ಸಲುವಾಗಿ ರೈತರಿಂದ ಜಮೀನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ.

ಶ್ರೀ ಯು.ಆರ್. ಸಭಾಪತಿ: (ಉಡುಪಿ) ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ (ಕಿಯೋನಿಕ್ಸ್) ಸಂಸ್ಥೆಯು 1995-96ನೇ ಸಾಲಿನಲ್ಲಿ ಸುಮಾರು ಒಂಬತ್ತು ಕೋಟಿಗಳಷ್ಟು ನಷ್ಟವನ್ನು ಅನುಭವಿಸಿದೆ. ಅದಾಗ್ಯೂ ಸಹ ಈ ಸಂಸ್ಥೆಯ ನಷ್ಟವನ್ನು ತುಂಬಿಕೊಳ್ಳುವ ಯೋಜನೆ ಮಾಡದೇ ಕೋನಪ್ಪನ ಅಗ್ರಹಾರ ಸುಮಾರು 200 ಕೆರೆ ಜಮೀನನ್ನು ಖರೀದಿಸಿ ಎಲೆಕ್ಟ್ರಾನಿಕ್ ನಗರವನ್ನು ಮಾಡಲು ಹೊರಡಿದೆ. ಈಗಾಗಲೇ ಸಂಬಂಧವಾಗಿ ಹಲವಾರು ಕಡೆ ಜಮೀನನ್ನು ಖರೀದಿಸಿ ರೈತರಿಗೆ ಉಳುಮೆ ಮಾಡಲು ಜಮೀನು ಇಲ್ಲದಂತೆ ಆಗಿರುತ್ತದೆ. ಈಗ ಈ ಭಾಗದಲ್ಲೂ ಸಹ ರೈತರ ಜಮೀನು ಸ್ವಾಧೀನ ಕ್ರಮ ಕೈಗೊಳ್ಳಲು ಹೊರಟಿರುವುದರಿಂದ ರೈತರಿಗೆ ತುಂಬಾ ಅನ್ಯಾಯವಾಗುತ್ತಿದೆ. ಆದುದರಿಂದ ಈ ವಿಷಯವನ್ನು ಬೃಹತ್ ಕೈಗಾರಿಕಾ ಸಚಿವರು ಸಾರ್ವಜನಿಕ ಮಹತ್ತರ ವಿಷಯವಾದ ಇದನ್ನು ಅತಿ ಶೀಘ್ರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ಈ ಸದನದ ಗಮನವನ್ನು ಸೆಳೆಯಲಿಚ್ಚಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: (ಗ್ರಾಮೀಣ ಮತ್ತು ಪಂಚಾಯಿತ ರಾಜ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಯವರ ಗಮನಕ್ಕೆ ತಂದು ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಮಂಗಳೂರು ನಗರವನ್ನು ಅಭಿವೃದ್ಧಿಪಡಿಸಲು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಹಾಗೂ ವರ್ಲ್ಡ್ ಬ್ಯಾಂಕಿನ ಸಹಾಯದಿಂದ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ.

ಶ್ರೀ ಕುಂಬಳೆ ಸುಂದರರಾವ್ (ಸೂರತ್ಕಲ್): (ಶ್ರೀ ಯೋಗೇಶ್ ಭಟ್ಟರವರ ಪರವಾಗಿ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್ಟರವರು ಮಂಗಳೂರಿಗೆ ಹೋಗಿದ್ದಾರೆ. ಅವರು ಸಭಾಧ್ಯಕ್ಷರಿಗೆ ಆಥಾರೈಜೇಷನ್ ಲೆಟರ್ ಕೊಟ್ಟಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಯ ಡ್ರೈನೇಜ್ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ (2ನೇಯ ಹಂತದ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ತರಲು) ರಸ್ತೆ ಸುಧಾರಣೆಗೆ, ಮಾರ್ಕೆಟ್ ಕಟ್ಟಡ ಅಭಿವೃದ್ಧಿಗೊಳಿಸಲು, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್, ಅಥವಾ ವರ್ಲ್ಡ್ ಬ್ಯಾಂಕಿನ ಸಹಾಯದಿಂದ ಯಾವ ಕಾರ್ಯಕ್ರಮ ಹಾಕಿಕೊಂಡಿದೆ? ವಿವರಿಸಿ, ಇದಕ್ಕೆ ಪೂರಕವಾಗಿ ಅಧ್ಯಯನ ನಡೆಸಲು ಟಾಟಾ ಕನ್ಸಲ್ಟೆನ್ಸಿಗೆ ಪರವಾನಿಗೆ ಕೊಡಲು ರಾಜ್ಯ ಸರ್ಕಾರ ಕಳೆದ ಆರು ತಿಂಗಳುಗಳಿಂದ ವಿಳಂಬ ಮಾಡಿದ ಉದ್ದೇಶವೇನು? ಯಾವಾಗ ಪರವಾನಿಗೆ ಕೊಡುತ್ತೀರಿ ಎಂಬುದರ ಬಗ್ಗೆ ರಾಜ್ಯ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆರು ತಿಂಗಳಿಗೊಮ್ಮೆ ಅಧಿವೇಶನ ಸೇರುವುದು. ಮಂತ್ರಿಗಳಿಗೆ ಪುರಸೊತ್ತು ಇಲ್ಲವೆಂದರೆ ಹೇಳಿ ಅವರು ಎಲ್ಲೆ ಇರುತ್ತಾರೆ, ಅಲ್ಲಿಗೇ ಹೋಗಿ ಉತ್ತರವನ್ನು ಕೇಳುತ್ತೇವೆ.